**ಸಾಕ್ಷಿಗೆ ದಿನಾಂಕ 09-02-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿಯ ಪರ ವಕೀಲರಿಂದ:**

**1.** ನಾನು ಈ ಪ್ರಕರಣದಲ್ಲಿ, ವಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

**2.** ನಾನು ಈ ಪ್ರಕರಣದಲ್ಲಿ ತೆಗೆದುಕೊಂಡಿರುವ ನಿಲುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ಧೃಢಿಕೃತ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.

| | |
|---|---|
| ನಿ.ಪಿ 1. | ಚೆಕ್ಕು |
| ನಿ.ಪಿ 2 ಮತ್ತು 3 | 2 ಬ್ಯಾಂಕಿನ ಹಿಂಬರಹಗಳು |
| ನಿ.ಪಿ 4 | ಲೀಗಲ್ ನೋಟಿಸಿನ ಕಛೇರಿ ಪ್ರತಿ |
| ನಿ.ಪಿ 5. | ಅಂಚೆ ರಶೀದಿ |
| ನಿ.ಪಿ 6. | ಅಂಚೆ ಸ್ವೀಕೃತಿ |

**3.** ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀಸವಾಲು: ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರುಹಾಜರು ಮತ್ತು ಲಿಖಿತ ಹೇಳಿಕೆ ಸಲ್ಲಿಸದೇ ಇರುವುದರಿಂದ, ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ: ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**